ಪ್ರಸಾರ ಮಾಡಲಾಗಿತ್ತು. ಅಂದು ಶುರುವಾದ ಕೃತಕ ಬುದ್ಧಿಮತ್ತೆಯ ಸಂಶೋಧನೆ ಮತ್ತು ಬಳಕೆ ರಾಕೆಟ್ ವೇಗದಲ್ಲಿ ಇಂದಿಗೂ ನಡೆಯುತ್ತಿದೆ.

**ಬೇಕು ಬೇಡಗಳ ಜಗಳಬಂದಿ**

ಮನುಷ್ಯನಿಂದ ನಿರ್ಮಿತವಾಗಿ, ಅವನಿಂದಲೇ ಬುದ್ಧಿ ಪಡೆದ ಯಂತ್ರಗಳು ಮನುಷ್ಯನ ಸ್ವಾರ್ಥವನ್ನೂ ಮೈಗೂಡಿಸಿಕೊಂಡರೆ ವಿನಾಶ ಬಿಚ್ಚಿಟ್ಟ ಬುತ್ತಿ ಎನ್ನುವುದು ಸಮಾಜ ವಿಜ್ಞಾನಿಗಳ ಆತಂಕ. ಯಂತ್ರಗಳು ತಂತಮ್ಮಲ್ಲೇ ಹೊಂದಾಣಿಕೆ ಮಾಡಿಕೊಂಡು ಇಲ್ಲವೇ ಪೈಪೋಟಿಗಿಳಿದು ವಿಧ್ವಂಸಕ ಕೃತ್ಯಗಳಿಗೆ ಕೈ ಹಾಕಿದರೆ ಗತಿಯೇನು? ಅವು ನಮ್ಮ ವಿರುದ್ಧ ತಿರುಗಿ ಬಿದ್ದರೆ ರಕ್ಷಣೆಗಾಗಿ ಯಾರ ಬಳಿ ಹೋಗುವುದು? ಈಗ ನಾವೆಲ್ಲ ನಮ್ಮನ್ನು ಸೃಷ್ಟಿಸಿ, ಪೊರೆದು ಸಲಹುತ್ತಿರುವ ನಿಸರ್ಗದ ವಿರುದ್ಧ ತಿರುಗಿ ಬಿದ್ದಿಲ್ಲವೆ? ಹಾಗೆ! ರಜನೀಕಾಂತ್ ಅಭಿನಯದ 'ಎಂದಿರನ್', ವಿಲ್‌ಸ್ಮಿತ್ ಅಭಿನಯದ 'ಐ' ರೋಬೊಗಳು ಸಿನಿಮಾದಲ್ಲಿ ಹೇಗೆ ಮಾಡಿದವೋ ಹಾಗೆ ನಿಜ ಜೀವನದಲ್ಲೂ ನಡೆದರೆ ಗತಿ ಏನು?

ಲಕ್ಷಾಂತರ ಜನ ಮಾಡುತ್ತಿರುವ ಸಾಮಾನ್ಯ ಉದ್ಯೋಗಗಳನ್ನೆಲ್ಲ ನುಂಗಿಹಾಕುವ ಕೃತಕ ಬುದ್ಧಿಮತ್ತೆಯ ಯಂತ್ರಗಳು ಭಾರೀ ನಿರುದ್ಯೋಗ ಸಮಸ್ಯೆಯನ್ನು ಸೃಷ್ಟಿಸಲಿವೆ ಎನ್ನುವ ಆರ್ಥಿಕ ತಜ್ಞರು, ಈ ತಂತ್ರಜ್ಞಾನ ಅಭಿವೃದ್ಧಿ ಹಾದಿಯ ಮುಳ್ಳು ಎಂದಿದ್ದಾರೆ.

ಎಐ ಆಧಾರಿತ ಕೆಲಸ ಮಾಡಲು ಲಕ್ಷಾಂತರ ತಂತ್ರಜ್ಞರ ಅವಶ್ಯಕತೆ ಇನ್ನು 10–15 ವರ್ಷಗಳ ಕಾಲ ಏರುತ್ತಲೇ ಹೋಗುತ್ತದೆ ಎನ್ನುವುದು ವಿಜ್ಞಾನಿಗಳ ಲೆಕ್ಕಾಚಾರ. ಭಯೋತ್ಪಾದಕರು, ಕಳ್ಳರು, ಯುದ್ಧಪಿಪಾಸು ಮಿಲಿಟರಿ ನಾಯಕರು, ವರ್ಣದ್ವೇಷಿ ಮಹಾತ್ವಾಕಾಂಕ್ಷಿಗಳು, ಸ್ವಾರ್ಥಿ ರಾಜಕೀಯ ನಾಯಕರ ಕೈಗೆ ಎಐ ತಂತ್ರಜ್ಞಾನ ಮುಕ್ತವಾಗಿ ಸಿಕ್ಕರೆ ಅಣುಯುದ್ಧಕ್ಕಿಂತ ನೂರುಪಟ್ಟು ದೊಡ್ಡ ಅನಾಹುತ ಸಂಭವಿಸುತ್ತದೆ ಎಂಬ ಅಭಿಪ್ರಾಯ ಬುದ್ಧಿಜೀವಿಗಳ ವಲಯದಲ್ಲಿ ದಟ್ಟವಾಗಿ ಹಬ್ಬಿದೆ. ಮೆಕೆನ್ಸಿ ಅಂತರರಾಷ್ಟ್ರೀಯ ಸಂಸ್ಥೆ, '2030ರ ವೇಳೆಗೆ ಜಗತ್ತಿನ ಸರಿ ಸುಮಾರು ಶೇ.15ರಷ್ಟು ಕಾರ್ಮಿಕರು ಸ್ಥಾನಪಲ್ಲಟಗೊಳ್ಳಲಿದ್ದಾರೆ. ಮೆಶೀನ್ ಲರ್ನಿಂಗ್, ಇಂಟರ್‌ನೆಟ್ ಆಫ್ ಥಿಂಗ್ಸ್, ಮೊಬೈಲ್ ತಂತ್ರಜ್ಞಾನ – ಇವೇ ಮೊದಲಾದ ವೈವಿಧ್ಯಮಯ ಕೌಶಲ್ಯಗಳನ್ನು ಮೈಗೂಡಿಸಿಕೊಂಡ ಎಂಜಿನಿಯರುಗಳಿಗೆ ಬಹಳಷ್ಟು ಉದ್ದಿಮೆಗಳಲ್ಲಿ ಬೇಡಿಕೆ ವೃದ್ಧಿಯಾಗುತ್ತದೆ' ಎಂದಿದೆ.

ವಿಶ್ವದ 90ಕ್ಕೂ ಹೆಚ್ಚು ದೇಶಗಳು 'ಎಐ' ತಂತ್ರಜ್ಞಾನವನ್ನು ನಾ ಮುಂದು ತಾ ಮುಂದು ಎಂದು ಮುಕ್ತಮನಸ್ಸಿನಿಂದ ಸ್ವಾಗತಿಸಿವೆ. '2030ರ ವೇಳೆಗೆ ಕೃತಕ ಬುದ್ಧಿಮತ್ತೆ ಕ್ಷೇತ್ರದ ಸೂಪರ್ ಪವರ್ ಎನ್ನಿಸಿಕೊಳ್ಳಲು ಚೀನಾ ಎಡೆಬಿಡದೆ ಶ್ರಮಿಸುತ್ತಿದೆ. ಕನಿಷ್ಠ 60 ದೇಶಗಳಿಗೆ ಎಐ ತಂತ್ರಜ್ಞಾನವನ್ನು ಮಾರಿರುವ ಚೀನಾ ಇಡೀ ಜಗತ್ತಿನ ಎಐ ಮಾರುಕಟ್ಟೆಯಲ್ಲಿ ತನ್ನ ಅಧಿಪತ್ಯ ಸ್ಥಾಪಿಸಿದೆ. ಹುವೇಯ್ ಮತ್ತು ZTE ಕಂಪನಿಗಳು ಪಾಕಿಸ್ತಾನ, ಫಿಲಿಪ್ಪೀನ್ಸ್ ಮತ್ತು ಕೀನ್ಯಾ ದೇಶಗಳಲ್ಲಿ ಎಐ ಆಧಾರಿತ ಸ್ಮಾರ್ಟ್ ಸಿಟಿಗಳನ್ನೇ ನಿರ್ಮಿಸುತ್ತಿವೆ. ಜನರ ಮುಖಚಹರೆ ಪತ್ತೆಮಾಡಲು, ಅತ್ಯುತ್ಕೃಷ್ಟ ಕ್ಯಾಮೆರಾಗಳನ್ನು ನಿರ್ಮಿಸಿರುವ ಹೈಕ್ ವಿಷನ್, ಇಟು ಮತ್ತು ಸೆನ್ಸ್‌ಟೈಂ ಕಂಪನಿಗಳು ಸಿಂಗಪುರದ ಬೀದಿ ದೀಪದ ಕಂಬಗಳ ಮೇಲೆ ಒಂದೂವರೆ ಲಕ್ಷ ಕ್ಯಾಮೆರಾಗಳನ್ನು ಅಳವಡಿಸಿ ಪ್ರತೀ ಪ್ರಜೆಯ ಚಲನವಲನಗಳ ಮೇಲೆ ನಿಗಾವಹಿಸಿದೆ.

ಪುಟ್ಟ ದೇಶ ಜಿಂಬಾಬ್ವೆ ಸಹ ನಾವೇನೂ ಕಮ್ಮಿಯಿಲ್ಲ ಎಂದು ಚೀನಾದ 'ಎಐ' ತಂತ್ರಜ್ಞಾನ ಬಳಸಿ ಇಡೀ ದೇಶದ ಜನ ಡಿಎನ್‌ಎ ದತ್ತಾಂಶವನ್ನು ಸಂಗ್ರಹಿಸಲು ಪ್ರಾರಂಭಿಸಿದೆ. ಎಐ ತಂತ್ರಜ್ಞಾನದ ಸಲಕರಣೆಗಳ ಉತ್ಪಾದನೆಯಲ್ಲಿ ಚೀನಾದೊಂದಿಗೆ ಪೈಪೋಟಿಗೆ ಬಿದ್ದಿರುವ ಅಮೆರಿಕದ ಪಿಟಿಎಂ, ಸಿಸ್ಕೊ, ಥರ್ಮೋ ಫಿಶರ್ ಕಂಪನಿಗಳು ಉತ್ತಮ ಪ್ರಾಡಕ್ಟ್‌ಗಳನ್ನು ಅಭಿವೃದ್ಧಿಪಡಿಸಿ ವಿಶ್ವದಾದ್ಯಂತ ಮಾರಾಟ ಮಾಡುತ್ತಿವೆ. ಇದರಿಂದಾಗಿ ಕಳೆದ ಒಂದು ವರ್ಷದಲ್ಲಿ 4 ಶತಕೋಟಿ ಡಾಲರ್ ವಹಿವಾಟು ನಡೆಸಿರುವ ಚೀನಾ, ಅಮೆರಿಕಗಳು ಈ ವರ್ಷದಲ್ಲಿ ಅದನ್ನು ದುಪ್ಪಟ್ಟು ಮಾಡುವ ಯೋಜನೆಗೆ ಕೈಹಾಕಿವೆ. ಕೃತಕ ಬುದ್ಧಿಮತ್ತೆ ಸಾಧನಗಳ ತಯಾರಿಕೆಗೆ ಮೀಸಲಿಟ್ಟಷ್ಟೇ ಬಂಡವಾಳ ಮತ್ತು ಸಮಯವನ್ನು ಉದ್ಯೋಗಿಗಳ ಪುನರ್ ಕೌಶಲಕ್ಕೆ ಮೀಸಲಿಟ್ಟಿರುವ ಭಾರತೀಯ ಉದ್ದಿಮೆಗಳು ನೌಕರಸ್ನೇಹಿ ಎಂಬ ಹೆಸರು ಗಳಿಸುತ್ತಿವೆ. ವಿಪ್ರೋ ಕಂಪನಿ, ಎಐ ತಂತ್ರಜ್ಞಾನವನ್ನು ಕಲಿಸಲು 'ನ್ಯೂಟನ್ ಕ್ರೇಡಲ್' ಯೋಜನೆಯನ್ನು

artificial intelligence




2009 ಜನವರಿ 10ರಲ್ಲಿ ಲಾಸ್ ವೇಗಾಸ್‌ನಲ್ಲಿ, ಕೃತಕ ಬುದ್ಧಿಮತ್ತೆ ಮತ್ತು ಮುಖಚಹರೆ ಗುರ್ತಿನ ತಂತ್ರಜ್ಞಾನ ಬಳಸಿ ದಟ್ಟ ಜನಸಂದಣಿಯ ನಡುವೆಯೂ ನಿರ್ದಿಷ್ಟ ವ್ಯಕ್ತಿಯನ್ನು ಗುರ್ತಿಸುವ ತಂತ್ರಜ್ಞಾನದ ನೇರ ಪ್ರಾತ್ಯಕ್ಷಿಕೆ ನೀಡಲಾಯಿತು. ಇದು ಆ ಸಂದರ್ಭದಲ್ಲಿ ತೆಗೆದ ಚಿತ್ರ.
ಮುಖಚಹರೆ ಗುರ್ತಿನ ತಂತ್ರಜ್ಞಾನದ ಬಳಕೆಗೆ ಕಾನೂನಿಕ ಕಡಿವಾಣ ಬೇಕೆ ಬೇಡವೇ ಎಂಬ ಕುರಿತು ಅಮೆರಿಕದಲ್ಲಿ ಸಾಕಷ್ಟು ಚರ್ಚೆಗಳಾಗಿವೆ.
ಬಹುಸಂಖ್ಯಾತರು, ಸುರಕ್ಷತೆ ಮತ್ತು ಉತ್ತರದಾಯಿತ್ವದ ದೃಷ್ಟಿಯಿಂದ ಕಾನೂನು ಅಗತ್ಯವಿದೆ ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಖಾಸಗಿ ವಲಯದಲ್ಲಿ ಕೃತಕಬುದ್ಧಿಮತ್ತೆ ಬಳಕೆಗೆ ಮುಕ್ತ ಅವಕಾಶ ಇದ್ದರೆ ಸಾಕಷ್ಟು ಅಭಿವೃದ್ಧಿ ಹೊಂದಲು ಸಾಧ್ಯ ಎಂಬ ವಾದವೂ ಇದೆ.